# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 381 (415)**

**ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 10.03.2025**

**ಉತ್ತರಿಸುವವರು : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವನ್ಯ ಜೀವಿಗಳು ನಗರ ಮತ್ತು ಗ್ರಾಮದೊಳಗೆ ಬರುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ: | ರಾಜ್ಯದಲ್ಲಿ ವನ್ಯಪ್ರಾಣಿಗಳು ನಗರ ಮತ್ತು ಗ್ರಾಮ ಒಳಗೆ ಬರುತ್ತಿರುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>**ಭೌತಿಕ ಅಡೆತಡೆಗಳ ನಿರ್ಮಾಣ:**<br>• ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>• ರಾಜ್ಯದಲ್ಲಿ ಮಾನವ-ಆನೆ ಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ನಿಯಂತ್ರಿಸಲು ಉಪಯೋಗಿಸಿದ ರೈಲ್ವೆ ಹಳಿಗಳನ್ನು ಉಪಯೋಗಿಸಿಕೊಂಡು ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಒಟ್ಟು.391.832 ಕಿ.ಮೀ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ.<br>**ಆನೆ ಕಾರ್ಯಪಡೆಗಳ ಸ್ಥಾಪನೆ:**<br>• ಸರ್ಕಾರವು ದಿನಾಂಕ:21.11.2022 ರ ಆದೇಶದಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹಾಗೂ ದಿನಾಂಕ:01.02.2023ರ ಆದೇಶದಲ್ಲಿ ಚಾಮರಾಜನಗರ ಜಿಲ್ಲೆ, ದಿನಾಂಕ:30.06.2023ರ ಆದೇಶದಲ್ಲಿ ರಾಮನಗರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಮತ್ತು ದಿನಾಂಕ:18.05.2024 ರ ಆದೇಶದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೆ ಒಂದರಂತೆ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ 08 ಆನೆ ಕಾರ್ಯಪಡೆ (Elephant Task Force) ನ್ನು ರಚಿಸಲಾಗಿರುತ್ತದೆ.<br><br>**ಚಿರತೆ ಕಾರ್ಯಪಡೆಗಳ ಸ್ಥಾಪನೆ:**<br>• ಸರ್ಕಾರವು ದಿನಾಂಕ: 31.01.2023ರ ಆದೇಶದಲ್ಲಿ ಮೈಸೂರು ವೃತ್ತದ ಮೈಸೂರು / ನಂಜನಗೂಡು / ಹೆಚ್.ಡಿ.ಕೋಟೆ / ಸರಗೂರು / ಟಿ.ನರಸೀಪುರ / ಮಂಡ್ಯ / ಪಾಂಡವಪುರ / ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ಇವರ ನೇತೃತ್ವದಲ್ಲಿ ಚಿರತೆ ಕಾರ್ಯಪಡೆ (Leopard Task Force) ರಚಿಸಲಾಗಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ರವರ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 24.11.2023ರಲ್ಲಿ ಬೆಂಗಳೂರು ಜಿಲ್ಲೆಯ ಕಗ್ಗಲೀಪುರ / ಆನೇಕಲ್ಲು / ಯಲಹಂಕ / ಹೊಸಕೋಟೆ / ಕೆ.ಆರ್.ಪುರಂ ವಲಯಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಚಿರತೆ ಕಾರ್ಯಪಡೆಯನ್ನು ರಚಿಸಲಾಗಿದೆ. |

**ಜಲ ಸಂಪನ್ಮೂಲ ಅಭಿವೃದ್ಧಿ:**

- ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನ ಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.

**ಆವಾಸ ಸ್ಥಾನ ಅಭಿವೃದ್ಧಿ:**

- ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**ತ್ವರಿತ ಕಾರ್ಯಾಚರಣೆ:**

- ಆನೆ ಕಾರ್ಯಪಡೆ (ETF) ಮತ್ತು ಚಿರತೆ ಕಾರ್ಯಪಡೆ (LTF) ಗಳಿಗೆ 24X7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ.
- ಚಿರತೆ / ಹುಲಿ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಬೋನುಗಳನ್ನು ಇರಿಸಿ ಸೆರೆ ಹಿಡಿದು, ಸೂಕ್ತ ಆವಾಸಸ್ಥಾನಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ.
- ಕಾಡಾನೆ ಹಾವಳಿ ತುರ್ತು ನಿರ್ವಹಣೆಗಾಗಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು (RRT) ರಚಿಸಿ ನಿರ್ವಹಿಸಲಾಗುತ್ತಿದೆ.
- ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.
- ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.
- ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.
- ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.
- ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.
- ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಈಗಾಗಲೇ ರಚಿಸಿರುವ RRT, ADC, ಮತ್ತು ETF ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂಡಗಳನ್ನು ಒಟ್ಟುಗೂಡಿಸಿ ಮಾನವ-ವನ್ಯಜೀವಿ ಸಂಘರ್ಷ ಉಪ ತಂಡಗಳಾಗಿ ರಚಿಸಿ ಆಯ್ದ ಸ್ಥಳಗಳಲ್ಲಿ ನಿಯೋಜಿಸಲಾಗಿದೆ.
- ಸರ್ಕಾರದ ಆದೇಶ ಸಂಖ್ಯೆ: ಅಪಜೀ 96 ಎಫ್.ಡಬ್ಲ್ಯು.ಎಲ್. 2016 ದಿನಾಂಕ: 01.10.2016 ರಲ್ಲಿ ಮಾನವ ಪ್ರಾಣಕ್ಕೆ ಅಥವಾ ಸ್ವತ್ತಿಗೆ ಅಪಾಯಕಾರಿಯಾಗಿರುವ ಹಾಗೂ ಬೆಳೆನಾಶ ಮಾಡುವ ಕಾಡು ಹಂದಿಗಳನ್ನು ಷರತ್ತುಬದ್ಧವಾಗಿ ಕೊಲ್ಲಲು ಅನುಮತಿ ನೀಡುವ ಬಗ್ಗೆ ಆದೇಶಿಸಲಾಗಿದೆ.

**ಅರಿವು ಮೂಡಿಸಲು:**

- ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.
- ಶಾಲಾಮಕ್ಕಳಿಗೆ ಅರಿವು ಮೂಡಿಸಲು "ಚಿಣ್ಣರ ವನದರ್ಶನ" ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ.

**ಸಹಾಯ ಧನ:**

- ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.

- ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ ಎಲ್ ಪಿ ಜಿ ಗ್ಯಾಸ್, ಸೋಲಾರ್ ದೀಪಗಳನ್ನು ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.
- ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ Cattle Shed ನಿರ್ಮಾಣ ಮಾಡಲು ಸಹಾಯ ಮಾಡಲಾಗುತ್ತಿದೆ.

**ತಂತ್ರಜ್ಞಾನ ಬಳಕೆ:**

- ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ "ಹೆಜ್ಜೆ" ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ.
- ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು Advance alert system ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.
- ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.
- ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "**AI**" Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.
- ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.

**ಆ)** ರಾಜ್ಯದಲ್ಲಿ ವನ್ಯ ಜೀವಿಗಳಿಂದ ಹಾನಿಗೊಳಗಾಗಿರುವವರ ಸಂಖ್ಯೆ ಎಷ್ಟು: ಜೀವ ಕಳೆದುಕೊಂಡವರ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು)

ರಾಜ್ಯದಲ್ಲಿ ಕಳೆದ 02 ವರ್ಷಗಳಲ್ಲಿ ವನ್ಯಪ್ರಾಣಿಗಳಿಂದ ಹಾನಿಗೊಳಗಾಗಿ ಮೃತಪಟ್ಟವರ ಜಿಲ್ಲಾವಾರು ಮಾಹಿತಿ ಈ ಕೆಳಗಿನಂತಿದೆ.

| ಕ್ರ.ಸಂ | ಜಿಲ್ಲೆ | ವರ್ಷ | |
|---|---|---|---|
| | | 2023-24 | 2024-25 (ಫೆಬ್ರುವರಿ- 2025ರ ಅಂತ್ಯಕ್ಕೆ) |
| 1 | ಕೊಡಗು | 10 | 7 |
| 2 | ಚಾಮರಾಜನಗರ | 18 | 8 |
| 3 | ಬೆಂಗಳೂರು ನಗರ | 1 | 1 |
| 4 | ಬೆಂಗಳೂರು ಗ್ರಾಮಾಂತರ | - | 1 |
| 5 | ರಾಮನಗರ | 8 | 2 |
| 6 | ಕೋಲಾರ | - | 4 |
| 7 | ಚಿಕ್ಕಬಳ್ಳಾಪುರ | 1 | - |
| 8 | ಹಾಸನ | 5 | 6 |
| 9 | ಕಲುಬುರ್ಗಿ | 1 | - |
| 10 | ಯಾದಗಿರಿ | 1 | |
| 11 | ರಾಯಚೂರು | - | 1 |
| 12 | ಬೀದರ್ | 1 | - |
| 13 | ಚಿತ್ರದುರ್ಗ | - | 1 |
| 14 | ದಾವಣಗೆರೆ | 1 | - |
| 15 | ಉತ್ತರಕನ್ನಡ | 2 | - |
| 16 | ಬೆಳಗಾವಿ | - | 1 |
| 17 | ಮೈಸೂರು | 6 | 2 |
| 18 | ಮಂಡ್ಯ | 1 | 1 |
| 19 | ಕೊಪ್ಪಳ | - | 1 |
| 20 | ಚಿಕ್ಕಮಗಳೂರು | 5 | 4 |
| 21 | ಉಡುಪಿ | 1 | - |
| 22 | ಶಿವಮೊಗ್ಗ | 2 | 2 |
| 23 | ದಕ್ಷಿಣ ಕನ್ನಡ | 1 | - |
| | **ಒಟ್ಟು** | **65** | **42** |

**ಇ)** ರಾಜ್ಯದಲ್ಲಿ ವನ್ಯ ಜೀವಿಯಿಂದ ಮೃತಪಟ್ಟವರಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಪರಿಹಾರ ಎಷ್ಟು: (ಸಂಪೂರ್ಣ ಮಾಹಿತಿ ನೀಡುವುದು)

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 114 ಎಫ್.ಡಬ್ಲ್ಯೂ.ಎಲ್ : 2022 ದಿನಾಂಕ: 15.12.2022 ರ ಆದೇಶದನ್ವಯ ವನ್ಯಪ್ರಾಣಿ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಕ್ಕೆ ರೂ.15.00 ಲಕ್ಷಗಳ ದಯಾತ್ಮಕ ಧನ ಪಾವತಿಸಲಾಗುತ್ತಿದೆ ಹಾಗೂ ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ ದಯಾತ್ಮಕ ಧನ ನೀಡುವುದರ ಜೊತೆಗೆ ಮಾಹೆಯಾನ ರೂ.4,000.00 ರಂತೆ 05 ವರ್ಷಗಳ ಅವಧಿಗೆ ಮಾಸಾಶನ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

| | | |
|---|---|---|
| ಈ) | ವನ್ಯ ಜೀವಿಗಳಿಂದ ಬೆಳೆ ಹಾನಿ ಮತ್ತು ಜಮೀನು ನಾಶಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಒಂದು ಎಕರೆಗೆ ಬೆಳೆಗೆ ಅನುಸಾರವಾಗಿ ಎಷ್ಟು ಪರಿಹಾರ ನೀಡಲಾಗುವುದು? | ಸರ್ಕಾರಿ ಆದೇಶ ಸಂಖ್ಯೆ: ಅಪಜೀ 156 ಎಫ್.ಡಬ್ಲ್ಯೂ.ಎಲ್: 2022 ದಿನಾಂಕ: 18.01.2023 ರ ಆದೇಶದಲ್ಲಿ ವನ್ಯಪ್ರಾಣಿಗಳ ದಾಳಿಯಿಂ ಉಂಟಾದ ಬೆಳೆ ನಾಶ ಪ್ರಕರಣಗಳಿಗೆ ಪ್ರಸ್ತುತ ದರಗಳನ್ನು ಮರು ನಿಗಧಿಪಡಿಸಿ ಹಿಂದಿನ ಸರ್ಕಾರಿ ಆದೇಶದಲ್ಲಿ ನೀಡಲಾಗುತ್ತಿದ್ದ ಬೆಳೆಗಳ ದರಗಳನ್ನು ದ್ವಿಗುಣಗೊಳಿಸಿ ದಯಾತ್ಮಕ ಧನ ಪಾವತಿಸಲು ಆದೇಶ ಹೊರಡಿಸಲಾಗಿದ್ದು, ಅದರಂತೆ ನಿಯಮಾನುಸಾರ ಪರಿಹಾರ ಪಾವತಿಸಲಾಗುತ್ತಿದೆ. |
| ಉ) | ಕಾಡಾನೆ ಕಾರ್ಯಾಚರಣೆ ಮತ್ತು ಹುಲಿ ಕಾರ್ಯಚರಣೆ ಇತ್ಯಾದಿ ಕಾರ್ಯಚರಣೆಗೆ ಒಟ್ಟು ತಗಲುತ್ತಿರುವ ವೆಚ್ಚ ಎಷ್ಟು; ಅದರಲ್ಲಿ ಸಾಕಾನೆಯಾಗಲಿ ಅಥವಾ ಸಿಬ್ಬಂದಿಗಳಿಗಾಗಲಿ ಸುರಕ್ಷಿತ ಹಿತದೃಷ್ಟಿಯಿಂದ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ; | ಮಾನವ ವನ್ಯಜೀವಿ ಸಂಘರ್ಷಕ್ಕೆ ಕಾರಣವಾದ ಕಾಡಾನೆ ಹಾಗೂ ಹುಲಿಗಳನ್ನು ಸ್ಪಷ್ಟವಾಗಿ ಗುರುತಿಸಿ, ಮುಖ್ಯ ವನ್ಯಜೀವಿ ಪರಿಪಾಲಕರಿಂದ ಅನುಮತಿ ಪಡೆದ ನಂತರ ಅರಣ್ಯ ಇಲಾಖೆಯ ಸಾಕಾನೆಗಳನ್ನು ಒಳಗೊಂಡಂತೆ ಅಧಿಕಾರಿ / ಸಿಬ್ಬಂದಿ ಹಾಗೂ ಪಶುವೈದ್ಯಾಧಿಕಾರಿಗಳ ತಂಡಗಳನ್ನು ರಚಿಸಿಕೊಂಡು ಸೆರೆಹಿಡಿಯುವ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಯಶಸ್ವಿಯಾಗಿ ಸೆರೆ ಹಿಡಿಯುವ ಕಾರ್ಯ ಪೂರ್ಣಗೊಳ್ಳುವವರೆಗೆ ಕಾರ್ಯಾಚರಣೆಯು ನಿರಂತರವಾಗಿ ನಡೆಯುವುದರಿಂದ ವೆಚ್ಚದ ಪರಿಮಿತಿಯನ್ನು ಇಷ್ಟೇ ಎಂದು ನಿಖರವಾಗಿ ನಿಗಧಿಪಡಿಸಲು ಸಾಧ್ಯವಿರುವುದಿಲ್ಲ. ಆದಾಗ್ಯೂ ಸಾಕಾನೆಗಳನ್ನು ಆನೆ ಶಿಬಿರಗಳಿಂದ ಸೆರೆಹಿಡಿಯಲು ನಿರ್ಧರಿಸಿರುವ ಪ್ರದೇಶಕ್ಕೆ ಸ್ಥಳಾಂತರಿಸಲು ಉಪಯೋಗಿಸುವ ಲಾರಿಗಳ ಬಾಡಿಗೆ, ಅವುಗಳ ಊಟ, ಸಿಬ್ಬಂದಿ ಹಾಗೂ ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವ ಆನೆ ಮಾವುತ, ಕಾವಾಡಿಗಳ, ವಾಹನ ಚಾಲಕರುಗಳ ಊಟದ ವ್ಯವಸ್ಥೆ, ತಾತ್ಕಾಲಿಕ ಶಿಬಿರಗಳ ನಿರ್ಮಾಣ, ಕ್ರೇನ್ ಗಳ ಬಳಕೆ ಹೀಗೆ ವಿವಿಧ ರೀತಿಯ ಕೆಲಸಗಳಿಗಾಗಿ ಒಂದು ಕಾಡಾನೆ ಸೆರೆಹಿಡಿಯಲು ಅಂದಾಜು 10 ರಿಂದ 12 ಲಕ್ಷ ಮತ್ತು ಒಂದು ಹುಲಿ ಸೆರೆಹಿಡಿಯಲು 4 ರಿಂದ 5 ಲಕ್ಷ ವೆಚ್ಚ ತಗಲುತ್ತಿದೆ.<br><br>ಸಾಕಾನೆ ಹಾಗೂ ಅರಣ್ಯ ಇಲಾಖೆಯ ಕ್ಷೇತ್ರ ಸಿಬ್ಬಂದಿ ಮತ್ತು ಸ್ಥಳೀಯ ಜನರಿಗೆ ಯಾವುದೇ ಅಪಾಯವಾಗದಂತೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು, ಹುಲಿ ಸೆರೆಹಿಡಿಯುವ ಕಾರ್ಯಾಚರಣೆಯ ಸಂಧರ್ಭದಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ನವದೆಹಲಿ ರವರ ಮಾರ್ಗಸೂಚಿಗಳನ್ವಯ (SOP) ಕಟ್ಟುನಿಟ್ಟಿನ ಅಗತ್ಯ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಹಾಗೂ ಆನೆ ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಕರ್ನಾಟಕ ಸರ್ಕಾರದಿಂದ ಅನುಮೋದಿತವಾಗಿರುವ ಕಾಡಾನೆ ಸೆರೆಹಿಡಿಯುವ ಪ್ರಮಾಣಿತ ಕಾರ್ಯಾಚರಣೆ ಕೈಪಿಡಿಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ. |
| ಊ) | ರಾಜ್ಯದಲ್ಲಿ 2021-25 ರವರೆಗೆ ಎಷ್ಟು ಕಾಡಾನೆ ಸೆರೆಹಿಡಿಯಲಾಗಿದೆ; ಎಷ್ಟು ಹುಲಿ ಸೆರೆ ಹಿಡಿದು ಸಂರಕ್ಷಿಸಲಾಗಿದೆ; ಎಷ್ಟು ಆನೆಗಳು ಪಳಗಿಸಲಾಗಿದೆ? (ಸಂಪೂರ್ಣ ಮಾಹಿತಿಯನ್ನು ನೀಡುವುದು) | ರಾಜ್ಯದಲ್ಲಿ 2021 ರಿಂದ ಈವರೆಗೆ 43 ಕಾಡಾನೆ ಹಾಗೂ 14 ಹುಲಿಗಳನ್ನು ಸೆರೆಹಿಡಿಯಲಾಗಿದೆ. ಸೆರೆಹಿಡಿಯಲಾದ 43 ಕಾಡಾನೆಗಳಲ್ಲಿ 22 ಆನೆಗಳನ್ನು ಆನೆ ಶಿಬಿರಕ್ಕೆ ಸ್ಥಳಾಂತರಿಸಲಾಗಿದೆ. |

**ಸಂಖ್ಯೆ: ಅಪಜೀ 36 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ.ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.